ಬಹಳ ದಿನಗಳ ಹಿಂದಿನ ಕತೆ ಇದು. ಪರ್ವತ ಪ್ರದೇಶದಲ್ಲಿ ವಾಸಿಸುತ್ತಿರುವ ಓರ್ವ ವ್ಯಕ್ತಿಯ ಹತ್ತಿರ ಅತೀ ಪ್ರಾಚೀನ ಕಾಲದ ಯಾವದೋ ಶಿಲ್ಪಿಯೊಬ್ಬ ಕಟೆದ ಒಂದು ವಿಗ್ರಹವಿತ್ತು. ಅವನ ಮನೆಯ ಮುಂದೆ ಅದು ಅಡ್ಡಲಾಗಿ ಬಿದ್ದುಕೊಂಡಿತ್ತು. ಅವನ ಗಮನ ಎಂದೂ ಆ ಮೂರ್ತಿಯತ್ತ ಹೋಗಲೇ ಇಲ್ಲ.

ಒಂದು ದಿನ ಓರ್ವ ನಗರವಾಸಿ ಅವನ ಮನೆಯ ಎದುರಿಗೆ ಹಾಯ್ದು ಹೊರಟಿದ್ದ. ಆತ ಕಲೆಯ ಬಗ್ಗೆ ತಿಳಿವಳಿಕೆ ಹೊಂದಿದ ವ್ಯಕ್ತಿಯಾಗಿದ್ದ. ಆ ವಿಗ್ರಹ ಕಂಡು ಆತ ಅಚ್ಚರಿಗೊಂಡ. ಅವನು ಆ ವ್ಯಕ್ತಿಗೆ ಕೇಳಿದ– 'ಈ ವಿಗ್ರಹವನ್ನು ಮಾರುವೆಯಾ?'

ವಿಗ್ರಹದ ಮಾಲೀಕ ನಕ್ಕ. ಸ್ವಲ್ಪ ಹೊತ್ತಿನ ನಂತರ ಕೇಳಿದ: 'ಈ ಒರಟಾದ ಹಾಗೂ ಹೊಲಸಾದ ಈ ವಿಗ್ರಹವನ್ನು ಯಾರು ಕೊಳ್ಳುತ್ತಾರೆ?'

ಆ ಅಪರಿಚಿತ ಹೇಳಿದ: 'ನೋಡು, ಈ ವಿಗ್ರಹದ ಬದಲು ನಿನಗೆ ಒಂದು ಚಿನ್ನದ ರೂಪಾಯಿ ಕೊಡುತ್ತೇನೆ.'

ಪರ್ವತ ಪ್ರದೇಶದಲ್ಲಿರುವ ಆ ಮನುಷ್ಯನಿಗೆ ಅಚ್ಚರಿ ಹಾಗೂ ಆನಂದ ಏಕಕಾಲಕ್ಕೆ ಉಂಟಾಯಿತು.

ನಗರವಾಸಿ ಆ ವಿಗ್ರಹವನ್ನು ಒಂದು ಆನೆಯ ಮೇಲೆ ಹೇರಿಕೊಂಡು ಪಟ್ಟಣಕ್ಕೆ ತಂದ. ಕೆಲವು ದಿನಗಳ ನಂತರ ಪರ್ವತ ಪ್ರದೇಶದಲ್ಲಿರುವ ಆ ಮನುಷ್ಯನಿಗೆ ಯಾವುದೋ ಕೆಲಸಕ್ಕೆ ಪಟ್ಟಣಕ್ಕೆ ಹೋಗಬೇಕಾದ ಪ್ರಸಂಗ ಬಂತು. ಅಲ್ಲಿ ಒಂದು ಅಂಗಡಿಯ ಮುಂದೆ ಬಹಳಷ್ಟು ಜನ ಸೇರಿರುವುದು ಕಾಣಿಸಿತು. ಆ ವ್ಯಕ್ತಿ ಕುತೂಹಲದಿಂದ ಹೋಗಿ ನೋಡಿದ. ನಡುವೆ ಇದ್ದ ಒಬ್ಬ ಮನುಷ್ಯ ಜೋರಾಗಿ ಕೂಗಿ ಜನರನ್ನು ಕರೆಯುತ್ತಿದ್ದ– 'ಬನ್ನಿ ಬನ್ನಿ, ಜಗತ್ತಿನಲ್ಲೇ ಅನುಪಮವಾದ ಹಾಗೂ ಸುಂದರವಾದ ವಿಗ್ರಹ ನೋಡಿರಿ; ಒಬ್ಬ ಶ್ರೇಷ್ಠ ಕಲಾವಿದನ ಕಲೆಯ ಉತ್ಕೃಷ್ಟ ಮಾದರಿಯನ್ನು ನೋಡಿರಿ... ಪ್ರವೇಶ ಶುಲ್ಕ ಕೇವಲ ಎರಡು ರೂಪಾಯಿ... ಬನ್ನಿ... ಬನ್ನಿ...'

ಆ ಪರ್ವತ ಪ್ರದೇಶದ ಮನುಷ್ಯ ಎರಡು ಚಿನ್ನದ ರೂಪಾಯಿ ಶುಲ್ಕ ಕೊಟ್ಟು ವಿಗ್ರಹ ನೋಡಲು ಒಳಗೆ ಹೋದ. ಒಂದು ಚಿನ್ನದ ರೂಪಾಯಿ ಪಡೆದು, ಅವನು ನೀಡಿದ ವಿಗ್ರಹವೇ ಅದಾಗಿತ್ತು!

*

